ಆರ್.ಬಿ.ಐ/2007-2008/183
ಯು.ಬಿಡಿ. ಸಿಓ.ಬಿಪಿಡಿ.(ಪಿಸಿಬಿ)ಸಂ. 20/12.05.001/2007-08

ನವೆಂಬರ್ 12, 2007

ಕಾರ್ಯನಿರ್ವಾಹಕ ಅಧಿಕಾರಿಗಳು,
ಎಲ್ಲ ಪ್ರಾಥಮಿಕ(ಪೌರ) ಸಹಕಾರಿ ಬ್ಯಾಂಕುಗಳು

ಮಾನ್ಯರೇ

**ಬ್ಯಾಂಕ್ ನೋಟುಗಳ ದುರ್ಬಳಕೆ**

ಬ್ಯಾಂಕ್ ನೋಟುಗಳನ್ನು ದುರ್ಬಳಕೆಮಾಡುವ ಮತ್ತು ನೋಟ್ ಕಟ್ಟುಗಳನ್ನು ಸ್ಟೇಪಲ್ ಮಾಡುವ ಬಗ್ಗೆ ಬ್ಯಾಂಕಿಂಗ್ ರೆಗ್ಯುಲೇಶನ್ ಕಾಯಿದೆ 1949(ಎ.ಎ.ಸಿ.ಎಸ್)ರ 35ಎ ಕಲಮಿನ ಅಡಿಯಲ್ಲಿ ಎಲ್ಲ ಪೌರ ಸಹಕಾರಿ ಬ್ಯಾಂಕುಗಳಿಗೆ ನೀಡಿದ ತಾ. ಜನವರಿ 9, 2002ರ ನಿರ್ದೇಶನ ಯುಬಿಡಿ. ಸಂಖ್ಯೆ ಡಿಐಆರ್.2/13.01.00/2001-02ನ್ನು ದಯವಿಟ್ಟು ಗಮನಿಸಿ.

2. ಬ್ಯಾಂಕುಗಳು, ಸಂಸ್ಥೆಗಳು ಮತ್ತು ಇತರರು ಬ್ಯಾಂಕ್ ನೋಟುಗಳ ಮೇಲೆ ಬರೆಯುವುದನ್ನು ಮುಂದುವರಿಸಿರುವುದು ಬ್ಯಾಂಕಿನ ಗಮನಕ್ಕೆ ಬಂದಿರುತ್ತದೆ. ಈ ಬಗೆಯ ಅಭ್ಯಾಸಗಳು ಬ್ಯಾಂಕಿನ ಸ್ವಚ್ಛನೋಟುಗಳ ನೀತಿಗೆ ವಿರುದ್ಧವಾಗಿದೆ ಎಂದು ಒತ್ತಿಹೇಳಲು ನಾವು ಇಚ್ಛಿಸುತ್ತೇವೆ. ಆದುದರಿಂದ, ಯಾವುದೇ ರೀತಿಯಲ್ಲಿ ಬ್ಯಾಂಕ್ ನೋಟುಗಳ ಮೇಲೆ ಬರೆಯದಿರುವಂತೆ ಬ್ಯಾಂಕುಗಳಿಗೆ ಸಲಹೆ ನೀಡಲಾಗಿದೆ. ಇದಲ್ಲದೆ, ಈ ಬಗ್ಗೆ ಅವರ ಸಿಬ್ಬಂದಿಗಳಿಗೆ, ಗ್ರಾಹಕರಿಗೆ ಮತ್ತು ಸಾರ್ವಜನಿಕರಿಗೆ ಶಿಕ್ಷಣ ನೀಡಲು ಸಹ ಅವರು ಪ್ರಯತ್ನಮಾಡಬಹುದು.

3. ಸ್ವೀಕೃತಿಯನ್ನು ಸಂಬಂಧಿಸಿದ ಪ್ರಾದೇಶಿಕ ಕಚೇರಿಗಳಿಗೆ ದಯವಿಟ್ಟು ನೀಡಿ.

ನಿಮ್ಮ ವಿಧೇಯ

(ಕೆ.ಕೆ. ಖೌಂಡ್)
ಮುಖ್ಯ ಮಹಾ ವ್ಯವಸ್ಥಾಪಕರು